"ಮಧುರ ಮಕ್ಕಳೇ - ದುಃಖಿತರನ್ನೆಲ್ಲಾ ಸುಖಿಯನ್ನಾಗಿ ಮಾಡುವುದು ಒಬ್ಬ ತಂದೆಯ ಕರ್ತವ್ಯವಾಗಿದೆ. ಅವರೇ ಸರ್ವರ ಸದ್ಗತಿದಾತ ಆಗಿದ್ದಾರೆ"

ಪ್ರಶ್ನೆ: ತಂದೆಯು ತಮ್ಮ ಮಕ್ಕಳಿಗೆ ಏರುವ ಕಲೆಯಲ್ಲಿ ಹೋಗಲು ಎಂತಹ ಯುಕ್ತಿಯನ್ನು ತಿಳಿಸುತ್ತಾರೆ?

ಉತ್ತರ: ತಂದೆಯು ಹೇಳುತ್ತಾರೆ - ಮಧುರ ಮಕ್ಕಳೇ ನಾನು ಏನನ್ನು ತಿಳಿಸುತ್ತೇನೆ ಅದನ್ನೇ ನೀವು ಕೇಳಿರಿ. ಬಾಕಿ ಏನೆಲ್ಲಾ ಕೇಳಿದ್ದೀರಿ ಅದನ್ನು ಮರೆಯಿರಿ. ಏಕೆಂದರೆ ಅದರಿಂದ ನೀವು ಕೆಳಗಿಳಿಯುತ್ತಾ ಬಂದಿದ್ದೀರಿ.

ಪ್ರಶ್ನೆ: ಯಾವ ಗುಹ್ಯ ರಹಸ್ಯವನ್ನು ನೀವು ಮಕ್ಕಳು ಅರಿತಿದ್ದೀರಿ ಆ ರಹಸ್ಯದಲ್ಲಿ ಎಲ್ಲಾ ವೇದ ಶಾಸ್ತ್ರಗಳ ಸಾರವು ಬಂದು ಬಿಡುತ್ತದೆ?

ಉತ್ತರ: ಬ್ರಹ್ಮನೇ ವಿಷ್ಣು ಮತ್ತೆ ವಿಷ್ಣುವೇ ಬ್ರಹ್ಮ ಹೇಗೆ ಆಗುತ್ತಾರೆ ಹೇಗೆ ಇಬ್ಬರೂ ಪರಸ್ಪರ ನಾಭಿಯಿಂದ ಬರುತ್ತಾರೆ ಈ ಗುಹ್ಯ ರಹಸ್ಯವನ್ನು ನೀವು ಮಕ್ಕಳೇ ತಿಳಿದಿದ್ದೀರಿ. ಇದು ಎಲ್ಲಾ ವೇದ ಶಾಸ್ತ್ರಗಳ ಸಾರವಾಗಿದೆ.

ಗೀತೆ: ನಯನ ಹೀನರಿಗೆ ಮಾರ್ಗ ತೋರಿಸು.............

ಓಂ ಶಾಂತಿ. ಮಧುರ ಮಧುರಾತಿ ಪ್ರೀತಿಯ ಬಹಳ ಕಾಲದಿಂದ ಅಗಲಿ ಹೋಗಿ ಸಿಕ್ಕಿರುವ ಮಕ್ಕಳೇ ಅರ್ಥವನ್ನಂತೂ ತಿಳಿದಿದ್ದೀರಿ. ಹಾಗೆ ನೋಡಿದರೆ ಸೃಷ್ಟಿಯ ಎಲ್ಲಾ ಮಕ್ಕಳು ತಂದೆಗೆ ಪ್ರಿಯರೇ ಆಗಿದ್ದಾರೆ. ಮನುಷ್ಯ ಮಾತ್ರರು ಯಾರೆಲ್ಲಾ ಇದ್ದಾರೆ ಅವರೆಲ್ಲಾ ಪರಮಪಿತ ಪರಮಾತ್ಮನ ಸಂತಾನರೆಂದು ಮಕ್ಕಳಿಗೆ ತಿಳಿದಿದೆ. ಇದು ಈಶ್ವರೀಯ ಪರಿವಾರ. ಪರಿವಾರದಲ್ಲಿ ಎಲ್ಲದಕ್ಕಿಂತ ಹೆಚ್ಚಿನ ಪ್ರೀತಿ ತಂದೆಯ ಜೊತೆಗೆ ಇರುತ್ತದೆ. ಆ ತಂದೆಯು ಮಕ್ಕಳನ್ನು ರಚಿಸುತ್ತಾರೆ. ಬೇಹದ್ದಿನ ತಂದೆಯು ಹೇಳುತ್ತಾರೆ ಪ್ರೀತಿಯ ಮಧುರಾತಿ ಮಧುರ ಅಗಲಿ ಹೋಗಿ ಸಿಕ್ಕಿರುವಂತಹ ಮಕ್ಕಳೇ ಐದು ಸಾವಿರ ವರ್ಷಗಳ ನಂತರ ಪುನಃ ಬಂದು ಮಿಲನ ಮಾಡಿದ್ದೀರಿ. ಯಾವಾಗ ಮಿಲನ ಮಾಡಿದಿರಿ? ಈ ಸಂಗಮಯುಗದಲ್ಲಿ. ಈ ಸಮಯದಲ್ಲಿಯೇ ತಂದೆಯು ಬಂದು ಎಲ್ಲಾ ಮಕ್ಕಳನ್ನು ಅಶಾಂತಿಯಿಂದ ಶಾಂತಿಯಲ್ಲಿ ಕರೆದುಕೊಂಡು ಹೋಗುತ್ತಾರೆ. ಶಾಂತಿಗೋಸ್ಕರ ಎಷ್ಟು ಕಾನ್ಫರೆನ್ಸ್ ಇತ್ಯಾದಿಗಳನ್ನು ಮಾಡುತ್ತಾರೆ. ಸೃಷ್ಟಿಯಲ್ಲಿ ಹೊಡೆದಾಟವು ಆಗಿ ಪರಸ್ಪರದಲ್ಲಿ ಹೇಗೆ ಶಾಂತಿಯಿಂದ ಇರುವುದೆಂದು ಪರಸ್ಪರ ಮಿಲನ ಮಾಡುತ್ತಾರೆ. ಇಲ್ಲವಾದರೆ ಪರಸ್ಪರದಲ್ಲಿ ಹೊಡೆದಾಡಿಕೊಂಡು ವಿನಾಶ ಮಾಡಿಕೊಳ್ಳುತ್ತಾರೆ. ವಿನಾಶದಿಂದ ಭಯ ಪಡುತ್ತಾರೆ. ತಂದೆಯೇ ಬಂದು ಸುಖಧಾಮ ಅಥವಾ ಆದಿ ಸನಾತನ ದೇವೀ ದೇವತಾ ಧರ್ಮವನ್ನು ಪುನಃ ಸ್ಥಾಪನೆ ಮಾಡುತ್ತಾರೆಂದು ಮರೆತಿದ್ದಾರೆ. ಅದು ಈಗ ಆಗುತ್ತಿದೆ. ನೀವೀಗ ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖದ ಆಸ್ತಿ ಪಡೆಯಲು ಕುಳಿತಿದ್ದೀರಿ. ಪರಮಪಿತ ಪರಮಾತ್ಮ ಬಂದು ಪುನಃ ಅಸುರೀ ಜಗತ್ತಿನ ವಿನಾಶ ಮಾಡಿಸುತ್ತಾರೆಂದು ನೀವು ತಿಳಿದಿರುವಿರಿ. ವಿನಾಶವಂತೂ ಆಗಲೇಬೇಕು. ಏಕೆಂದರೆ ಈ ಸಮಯದಲ್ಲಿ ಎಲ್ಲರೂ ದುಃಖಿಗಳಾಗಿದ್ದಾರೆ. ಇದು ತಂದೆಯ ಕಲ್ಪ-ಕಲ್ಪದ ಕರ್ತವ್ಯವಾಗಿದೆ. ಯಾರೆಲ್ಲಾ ದುಃಖಿಗಳಾಗಿದ್ದಾರೆ ಅವರನ್ನೆಲ್ಲಾ ಸುಖಿಗಳನ್ನಾಗಿ ಮಾಡುವುದು. ಉಳಿದಂತೆ ಯಾರು ಸ್ವಯಂ ದುಖಿಗಳು ಪತಿತರಿದ್ದಾರೆ ಅವರು ಬೇರೆಯವರನ್ನು ಪಾವನ ಸುಖಿಗಳನ್ನಾಗಿ ಹೇಗೆ ಮಾಡುತ್ತಾರೆ. ಅದೂ ಸಹ ಇಡೀ ಜಗತ್ತಿನ ಮಾತಾಗಿದೆ. ಸರ್ವರ ಸದ್ಗತಿದಾತ ಒಬ್ಬರೇ ಎಂದು ಗಾಯನವನ್ನು ಮಾಡುತ್ತಾರೆ. ಹೇ ಪರಮಪಿತ ಪರಮಾತ್ಮನೇ ಬಂದು ನಾವು ಪತಿತರನ್ನು ಪಾವನ ಮಾಡು ಎಂದು ಕರೆಯುತ್ತಾರೆ. ಭಾರತದಲ್ಲಿಯೇ ಗಾಡ್-ಗಾಡೆಸ್ಸ್ (ದೇವೀ-ದೇವತಗಳ) ರಾಜ್ಯವಿತ್ತೆಂದು ಎಲ್ಲಾ ಧರ್ಮದವರು ತಿಳಿದಿದ್ದಾರೆ. ಆ ಸಮಯದಲ್ಲಿ ನಾವು ಇರಲಿಲ್ಲ ಎಂಬುದನ್ನು ತಿಳಿದಿದ್ದಾರೆ. ಪ್ರಾಚೀನ ಭಾರತದ ಮಹಿಮೆ ಬಹಳಷ್ಟು ಇದೆ. ಭಗವಂತನು ಎಲ್ಲಕ್ಕಿಂತ ಮೊದಲು ಸ್ವರ್ಗವನ್ನು ರಚಿಸಿದರು. ಅದರ ಮಾಲೀಕರು ಯಾರಾಗಿದ್ದರು? ಭಾರತ ಸ್ವರ್ಗದಲ್ಲಿ ಚಿನ್ನ ವಜ್ರದ ಅರಮನೆಗಳಿದ್ದವು. ಭಾರತವು ಬಹಳ ಸಾಹುಕಾರವಾಗಿತ್ತು. ಈಗ ಕಲಿಯುಗದ ಅಂತ್ಯದಲ್ಲಿ ಅನೇಕಾನೇಕ ಧರ್ಮಗಳಿವೆ. ದೇವತಾ ಧರ್ಮವು ಪ್ರಾಯಃಲೋಪವಾಗಿದೆ. ಮಹಾನ್ ದುಃಖಿಗಳು ಕಂಗಾಲರಾಗಿ ಬಿಟ್ಟಿದ್ದಾರೆ. ಈ ಬ್ರಹ್ಮಾದಾದಾರವರಂತೂ ವಜ್ರದ ವ್ಯಾಪಾರಿಯಾಗಿದ್ದರು. ಇವರು ಜ್ಞಾನ ಹೇಳುವುದಿಲ್ಲ. ಈ ಬ್ರಹ್ಮಾರವರೂ ಸಹ ತಮ್ಮ ಜನ್ಮಗಳನ್ನು ತಿಳಿದಿಲ್ಲವೆಂದು ಈಗ ನಿರಾಕಾರ ತಂದೆ ಈ ಶರೀರದ ಮೂಲಕ ತಿಳಿಸುತ್ತಾರೆ. ನೀವು ಬ್ರಹ್ಮಾಕುಮಾರ-ಕುಮಾರಿಯರೂ ಸಹ ನಿಮ್ಮ ಜನ್ಮಗಳನ್ನು ತಿಳಿದುಕೊಂಡಿರಲಿಲ್ಲ. ನಾನು ಇವರಲ್ಲಿ ಪ್ರವೇಶ ಮಾಡುತ್ತೇನೆ. ಇದೂ ಸಹ ಡ್ರಾಮಾದಲ್ಲಿದೆ. ಹೇಗೆ ಆಗುತ್ತದೆ ಈ ಪ್ರಶ್ನೆಯೇ ಇಲ್ಲ. ತಂದೆಯು ಹೇಳುತ್ತಾರೆ ನನಗೆ ನನ್ನ ಶರೀರವೇ ಇಲ್ಲ. ನಾನು ಸಾಧಾರಣ ವೃದ್ಧನ ತನುವಿನಲ್ಲಿ ಪ್ರವೇಶ ಮಾಡುತ್ತೇನೆ. ಭಾರತದಲ್ಲಿಯೇ ಬರುತ್ತೇನೆ. ಇವರು ತಮ್ಮ ಜನ್ಮಗಳನ್ನು ತಿಳಿದಿಲ್ಲ. ನಾನು ಬಂದು ಇವರಿಗೆ ತಿಳಿಸುತ್ತೇನೆ. ಇದೆಲ್ಲಾ ಮಾಡಿ ಮಾಡಲ್ಪಟ್ಟಿರುವಂತಹ ಬೇಹದ್ದಿನ ದೊಡ್ಡ ನಾಟಕವಾಗಿದೆ. ಯಾವ ಸೆಕೆಂಡ್ ಪಾಸ್ ಆಗುತ್ತದೆ ಅದು ಪುನಃ ರಿಪೀಟ್ ಆಗುತ್ತದೆ. ಈ ಬೇಹದ್ದಿನ ನಾಟಕದ ರಹಸ್ಯವನ್ನು ತಂದೆಯೇ ತಿಳಿಸುತ್ತಾರೆ.

ತಂದೆ ಹೇಳುತ್ತಾರೆ - ಮಕ್ಕಳೇ ಏನೆಲ್ಲಾ ನೀವು ದಾನ ಪುಣ್ಯ ಇತ್ಯಾದಿ ಮಾಡುತ್ತಾ ಬಂದಿದ್ದೀರಿ ಅದೆಲ್ಲಾ ಭಕ್ತಿಮಾರ್ಗ. ಅದರಿಂದ

ಯಾವ ಪ್ರಾಪ್ತಿಯೂ ಇಲ್ಲ. ಏಕೆಂದರೆ ಭಕ್ತಿ ಮಾರ್ಗದಲ್ಲಿ ಈಗ ಯಾವ ಸಾರವೂ ಇಲ್ಲ. ಇಷ್ಟೆಲ್ಲಾ ಚಿತ್ರ ಇತ್ಯಾದಿ ಏನೆಲ್ಲಾ ಮಾಡಿ ಬಿಟ್ಟಿದ್ದಾರೆ ಇದಕ್ಕೇ ಗೊಂಬೆಗಳ ಪೂಜೆ ಎಂದು ಹೇಳಲಾಗುತ್ತದೆ. ಚಿತ್ರವನ್ನು ಮಾಡಿದರು, ತಿನ್ನಿಸಿದರು, ಕುಡಿಸಿದರು, ಮುಳುಗಿಸಿದರು ಇದೆಲ್ಲಾ ಬುದ್ಧಿ ಹೀನತೆ ಅಲ್ಲವೇ. ಯಜ್ಞವನ್ನು ರಚಿಸುವಾಗ ಮಣ್ಣಿನ ಒಂದು ದೊಡ್ಡ ಶಿವಲಿಂಗವನ್ನು ಮತ್ತು ಸಣ್ಣ ಸಣ್ಣ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಅವರು ಯಾರ ಪೂಜೆ ಮಾಡುತ್ತೇವೆಂದು ತಿಳಿಯುವುದಿಲ್ಲ. ತಂದೆ ಮತ್ತು ಮಕ್ಕಳು ಸರ್ವೀಸ್ ಮಾಡಿದ್ದಾರೆ ಅದಕ್ಕಾಗಿಯೇ ಅವರ ಪೂಜೆಯು ಆಗುತ್ತದೆ. ಶಿವಲಿಂಗವನ್ನು ಪೂಜೆ ಮಾಡುತ್ತಾರೆ, ನೀವು ಮಕ್ಕಳ (ಸಾಲಿಗ್ರಾಮಗಳನ್ನು) ಪೂಜೆ ಮಾಡುತ್ತಾರೆ. ನೀವು ಮಕ್ಕಳು ಈಗ ಭಾರತವನ್ನು ಪವಿತ್ರ ಮಾಡುವಂತಹ ಸರ್ವೀಸ್ ಮಾಡುತ್ತಿದ್ದೀರಿ. ನೀವು ಈಶ್ವರೀಯ ಸೇವಾಧಾರಿಗಳಾಗಿದ್ದೀರಿ. ನಿಮಗೆ ತಂದೆಯ ಜೊತೆ ಪ್ರೀತಿ ಇದೆ. ತಂದೆಯ ಶ್ರೀಮತದಂತೆ ನಡೆಯುತ್ತೀರಿ. ಆದ್ದರಿಂದಲೇ ಶ್ರೀಮದ್ ಭಗವತ್ಗೀತೆ ಎಂದು ಗಾಯನ ಇದೆ. ಭಗವಂತನು ಯಾವುದೇ ಶಾಸ್ತ್ರಗಳನ್ನು ಓದುವುದಿಲ್ಲ. ಯಾವುದೇ ಧರ್ಮ ಸ್ಥಾಪಕರು ಎಂದೂ ಯಾವ ಶಾಸ್ತ್ರಗಳನ್ನು ಆಧಾರವಾಗಿ ಇಟ್ಟುಕೊಳ್ಳುವುದಿಲ್ಲ. ಅವರು ಬರುವುದೇ ಧರ್ಮ ಸ್ಥಾಪನೆ ಮಾಡಲು. ಅವರ ಬಳಿ ಇರುವ ಜ್ಞಾನವನ್ನೇ ತಿಳಿಸುತ್ತಾರೆ. ಕ್ರೈಸ್ತ ಬಂದು ಬೈಬಲ್ ಏನೂ ಓದುವುದಿಲ್ಲ. ಅವರು ಧರ್ಮ ಸ್ಥಾಪನೆ ಮಾಡುತ್ತಾರೆ. ತಂದೆಯು ಬಂದು ಶ್ರೀಮತ ಕೊಡುತ್ತಾರೆ. ಶ್ರೀ ಎಂದರೆ ಶ್ರೇಷ್ಠ ಮತವಾಗಿದೆ. ಶ್ರೇಷ್ಠಾತಿ ಶ್ರೇಷ್ಠ ಮತವು ಭಗವಂತನದಾಗಿದೆ. ನೀವು ಮಕ್ಕಳು ಈಗ ಶ್ರೀಮತದಂತೆ ನಡೆಯುತ್ತೀರಿ. ತಂದೆಯು ಹೇಳುತ್ತಾರೆ ಮಕ್ಕಳೇ ನನ್ನನ್ನು ನೆನಪು ಮಾಡಿ ಕೇವಲ ಎರಡು ಅಕ್ಷರಗಳಿವೆ. ಬಹಳ ಪ್ರೀತಿಯಿಂದ ಹೇಳುತ್ತಾರೆ ಮಕ್ಕಳೇ ಎಂದು. ಅವರು ತಂದೆಯಾಗಿದ್ದಾರೆ. ನಾವೆಲ್ಲಾ ಈಶ್ವರೀಯ ಪರಿವಾರದ ಸದಸ್ಯರು ಆಗಿದ್ದೇವೆ. ಈ ಮಾತುಗಳು ಯಾರ ಬುದ್ಧಿಯಲ್ಲೂ ಇರಲಿಲ್ಲ ಬ್ರಹ್ಮಾರವರ ಬುದ್ಧಿಯಲ್ಲೂ ಇರಲಿಲ್ಲ. ತಂದೆಯು ಇವರ ಮೂಲಕ ತಿಳಿಸುತ್ತಾರೆ. ಇಷ್ಟೆಲ್ಲ ಮನುಷ್ಯಾತ್ಮರು ಇದ್ದಾರೆ ಆ ಎಲ್ಲಾ ಆತ್ಮಗಳನ್ನು ನಾನು ಪಾವನ ಮಾಡಿ ವಾಪಸ್ ಕರೆದುಕೊಂಡು ಹೋಗಬೇಕು. ನಾನು ಡ್ರಾಮಾನುಸಾರ ಪುನಃ ನಿಮ್ಮನ್ನು ಮರಳಿ ಕರೆದುಕೊಂಡು ಹೋಗಲು ಬಂದಿದ್ದೇನೆ. ಈ ತಂದೆಯು ಆತ್ಮಗಳ ಜೊತೆಯೇ ಮಾತನಾಡುತ್ತಾರೆ. ಇವರ ಆತ್ಮವು ಕೇಳುತ್ತದೆ. ತಂದೆ ನಮಗೂ ಜ್ಞಾನ ಕೊಡುತ್ತಿದ್ದಾರೆ ಇವರಿಗೆ ತಮ್ಮ ಶರೀರವಂತೂ ಇಲ್ಲ. ಶ್ರೀಕೃಷ್ಣನದು ಸಾಧಾರಣ ರೂಪ ಎಂದು ಹೇಳುವುದಕ್ಕೆ ಆಗುವುದಿಲ್ಲ ಕೃಷ್ಣನಂತೂ ಸ್ವರ್ಗದ ಮೊದಲನೇ ರಾಜಕುಮಾರ ಆಗಿದ್ದನು. ಆದರೂ ಅವರೆಲ್ಲಾ ಶ್ರೀಕೃಷ್ಣ ಭಗವಾನುವಾಚ ಎಂದು ಹೇಳುತ್ತಾರೆ. ಇದಂತೂ ಸಾಧ್ಯವೇ ಇಲ್ಲ. ಎಷ್ಟು ವ್ಯತ್ಯಾಸವಿದೆ. ಸಂಗಮದಲ್ಲಿ ಶ್ರೀಕೃಷ್ಣನಿರಲು ಸಾಧ್ಯವಿಲ್ಲ. ನಕಲಿ ಕೃಷ್ಣರು ಬಹಳ ಆಗಿ ಬಿಡುತ್ತಾರೆ. ಬಾಕಿ ಪ್ರಾಕ್ಟಿಕಲ್ ನಲ್ಲಿ ಸತ್ಯಯುಗದಲ್ಲಿಯೇ ಇರುತ್ತಾನೆ. ಕೃಷ್ಣನ ಹೆಸರಿನವರು ಇನ್ನೊಬ್ಬರು ಯಾರೂ ಇರಲು ಸಾಧ್ಯವಿಲ್ಲ. ಬಹಳ ಜನರು ತಮಗೆ ಕೃಷ್ಣ ಎಂದು ಹೆಸರು ಇಟ್ಟುಕೊಂಡಿದ್ದಾರೆ. ತಂದೆ ಹೇಳುತ್ತಾರೆ ಮಕ್ಕಳೇ ಈ ಅಂತಿಮ ಜನ್ಮದಲ್ಲಿ ಪವಿತ್ರರಾಗಿ. ಆಗ ಪವಿತ್ರ ಜಗತ್ತಿನ ಸ್ಥಾಪನೆಯಲ್ಲಿ ಜಯ ಸಿಗುತ್ತದೆ. ಪವಿತ್ರತೆಯಂತೂ ಒಳ್ಳೆಯದೇ ಆಗಿದೆ. ಅನೇಕ ಮಕ್ಕಳು ಪೆಟ್ಟು ತಿನ್ನುತ್ತಾರೆ. ಅಬಲೆಯರ ಮೇಲೆ ಅತ್ಯಾಚಾರ ಆಗುತ್ತದೆ. ತಂದೆಯೇ ಏನು ಮಾಡುವುದು, ನಮ್ಮನ್ನು ಈ ಬಂಧನದಿಂದ ಬಿಡಿಸಿ ಎಂದು ಬರೆಯುತ್ತಾರೆ. ನಾಟಕದಲ್ಲಿ ದ್ರೌಪದಿಗೆ ಸೀರೆಯನ್ನು ಕೊಟ್ಟಿದ್ದನ್ನು ತೋರಿಸುತ್ತಾರೆ. ಈ ರೀತಿ ಕಥೆಯನ್ನು ಮಾಡಿದ್ದಾರೆ. ತಂದೆ ಹೇಳುತ್ತಾರೆ ಮಕ್ಕಳೇ ಈಗ ಪವಿತ್ರರಾಗುವುದರಿಂದ ಇಪ್ಪತ್ತೊಂದು ಜನ್ಮ ನಿರ್ವಿಕಾರಿಯಾಗಿರುತ್ತೀರಿ. ಅದು ರಾಮ ರಾಜ್ಯವಾಗಿದೆ. ಮುಖ್ಯ ವಿಕಾರವು ಅಶುದ್ಧ ಅಹಂಕಾರ, ದೇಹಾಭಿಮಾನವಾಗಿದೆ. ದೇಹದ ಜೊತೆಗೆ ಮೋಹವಿರುತ್ತದೆ. ಅಲ್ಲಿ ಆತ್ಮಾಭಿಮಾನಿಯಾಗಿರುತ್ತಾರೆ ನಾವು ಹಳೆಯ ಶರೀರ ಬಿಟ್ಟು ಇನ್ನೊಂದು ಶರೀರ ತೆಗೆದುಕೊಳ್ಳುತ್ತೇವೆ. ಅದಕ್ಕೇ ಆತ್ಮ ಅಭಿಮಾನಿ ಎಂದು ಹೇಳಲಾಗುತ್ತದೆ. ತಂದೆಯು ಹೇಳುತ್ತಾರೆ ನೀವೆಲ್ಲರೂ ಆತ್ಮಗಳಾಗಿದ್ದೀರಿ. ಶಿವ ತಂದೆಯನ್ನು ನೆನಪು ಮಾಡಿರಿ ಏಕೆಂದರೆ ಈಗ ಹಿಂತಿರುಗಿ ಹೋಗಬೇಕಾಗಿದೆ. ಇದು ಆತ್ಮಗಳ ಸತ್ಯ-ಸತ್ಯ ಆತ್ಮೀಯ ಯಾತ್ರೆಯಾಗಿದೆ. ಎಲ್ಲರೂ ಸುಪ್ರೀಂ ತಂದೆಯ ಹತ್ತಿರ ಹೋಗಬೇಕು. ತೀರ್ಥ ಯಾತ್ರೆಗಳಿಗೆ ಹೋಗಬೇಕಾದರೂ ದಾರಿಯಲ್ಲಿ ರಾಮ-ರಾಮ ಎಂದು ಹೇಳುತ್ತಾ ಹೋಗುತ್ತಾರೆ. ತಂದೆಯು ಹೇಳುತ್ತಾರೆ ನೀವು ನನ್ನನ್ನು ನೆನಪು ಮಾಡುತ್ತಾ ಹೋಗಿ ಎಂದು. ಈಗ ಇಡೀ ಜಗತ್ತಿನವರೆಲ್ಲರೂ ರಾಜಯೋಗವನ್ನು ಕಲಿಯುವುದಿಲ್ಲ. ಕಲ್ಪದ ಹಿಂದಿನವರೇ ಇಲ್ಲಿಗೆ ಬರುತ್ತಾರೆ. ಈಗ ಸಸಿ ನೆಡಬೇಕು. ದೇವೀ ದೇವತಾ ಧರ್ಮದ ಮಧುರ ವೃಕ್ಷವೇನಿತ್ತೋ ಅದೀಗ ಪ್ರಾಯಃಲೋಪವಾಗಿದೆ. ಬಾಕಿ ಕೊಂಬೆ ರೆಂಬೆಗಳಿವೆ. ಹಾಗೆಯೇ ದೇವೀ ದೇವತಾ ಧರ್ಮದ ತಳಪಾಯ ಇಲ್ಲದಂತಾಗಿದೆ. ಕೇವಲ ಚಿಹ್ನೆ ಗಳು (ಚಿತ್ರ) ಮಾತ್ರ ಉಳಿದುಕೊಂಡಿವೆ. ಆದರೆ ಅವರು ಯಾರು ಎನ್ನುವುದು ಯಾರಿಗೂ ಗೊತ್ತಿಲ್ಲ ತಮ್ಮ ಧರ್ಮದ ಬಗ್ಗೆಯೂ ತಿಳಿದಿಲ್ಲ. ಆದ್ದರಿಂದ ಹಿಂದೂ ಧರ್ಮಎಂದು ಹೇಳುತ್ತಾರೆ.

ತಂದೆಯು ಹೇಳುತ್ತಾರೆ ನಿಮ್ಮ ಭಾರತ ಎಷ್ಟು ಶ್ರೇಷ್ಠವಾಗಿತ್ತು. ಧರ್ಮವೇ ಶಕ್ತಿ ಎಂದು ಧರ್ಮಕ್ಕೆ ಹೇಳಲಾಗುತ್ತದೆ. ಈಗ ದೇವತಾ ಧರ್ಮವಿಲ್ಲ. ಆ ಧರ್ಮ ಪುನಃ ಹೇಗೆ ಸ್ಥಾಪನೆಯಾಗುವುದು. ತಂದೆ ಸರ್ವಶಕ್ತಿವಂತ ಆಗಿದ್ದಾರೆ. ಆಸ್ತಿಯು ಅವರಿಂದಲೇ ಸಿಗುತ್ತದೆ. ಶಕ್ತಿಯು ಅವರಿಂದಲೇ ಸಿಗುತ್ತದೆ. ತಂದೆಯು ಸೃಷ್ಟಿಯ ಬೀಜರೂಪ ಆಗಿದ್ದಾರೆ. ನಾವು ಅವರ ಪರಿವಾರದವರಾಗಿದ್ದೇವೆ. ತಂದೆಯು ಸತ್ಯ ಆಗಿದ್ದಾರೆ, ಚೈತನ್ಯ ಆಗಿದ್ದಾರೆ, ಜ್ಞಾನದ ಸಾಗರ ಆಗಿದ್ದಾರೆ. ಎಲ್ಲವೂ ಆತ್ಮದಲ್ಲಿಯೇ ಇದೆ. ಆತ್ಮ ಕೇಳುತ್ತದೆ, ಓದುತ್ತದೆ. ಆತ್ಮದಲ್ಲಿಯೇ ಒಳ್ಳೆಯ ಕೆಟ್ಟ ಸಂಸ್ಕಾರಗಳಿರುತ್ತದೆ. ಈ ಸಮಯದಲ್ಲಿ ಎಲ್ಲರ ಆತ್ಮ ತಮೋಪ್ರಧಾನವಾಗಿದೆ. ಭಾರತವಾಸಿಗಳೇ ಎಲ್ಲಕ್ಕಿಂತ ಹೆಚ್ಚು ತಮೋಪ್ರಧಾನ ಬುದ್ಧಿಯವರಾಗಿದ್ದಾರೆ. ಶ್ರೇಷ್ಠಾತಿ ಶ್ರೇಷ್ಠ ಆತ್ಮಗಳು ಭಾರತದವರೇ ಆಗಿದ್ದರು, ಅವರೇ ಸ್ವರ್ಗದ ಮಾಲೀಕರಾಗಿದ್ದರು. ಇದು ಮಾಡಲ್ಪಟ್ಟಿರುವಂತಹ ನಾಟಕ. ಎಲ್ಲರಿಗೂ ತಮ್ಮ-ತಮ್ಮ ಪಾತ್ರ ಸಿಕ್ಕಿದೆ.

ಆತ್ಮಗಳೆಲ್ಲ ಒಂದೇ ರೀತಿ ಇದ್ದಾರೆ. ಆತ್ಮಗಳಲ್ಲೇನೂ ವ್ಯತ್ಯಾಸವಿಲ್ಲ. ನಮ್ಮ ಆತ್ಮ ಸಣ್ಣದಿದೆ, ತಂದೆಯದು ದೊಡ್ಡದು ಎಂದೇನೂ ಇಲ್ಲ. ಆತ್ಮ ಸಣ್ಣದು ದೊಡ್ಡದು ಇರುವುದಿಲ್ಲ. ಆತ್ಮ 84 ಜನ್ಮಗಳ ಪಾತ್ರವನ್ನು ಪುನಃ ರಿಪೀಟ್ ಮಾಡುತ್ತದೆ. ಅದರ ಅಂತ್ಯವೇ ಇಲ್ಲ. ಒಂದು ಆತ್ಮ ಎಷ್ಟು ಸರ್ವೀಸ್ ಮಾಡಬಹುದು. ಆ ಅವಿನಾಶಿ ಪಾತ್ರ ಎಂದೂ ಸಹ ಅಳಿಸಿ ಹೋಗುವುದಿಲ್ಲ. ಈ ಮಾತುಗಳನ್ನು ವಿಧ್ವಾಂಸರು, ಪಂಡಿತರು, ಶಾಸ್ತ್ರಗಳ ಅಥಾರಿಟಿಯವರು ತಿಳಿದಿದ್ದಾರೇನು? ಇಷ್ಟು ಸಣ್ಣ ಆತ್ಮದಲ್ಲಿ ಎಷ್ಟು ಪಾತ್ರವಿದೆ. ಪರಮಪಿತ ಪರಮಾತ್ಮನೂ ಸಹ ಡ್ರಾಮಾದ ವಶದಲ್ಲಿದ್ದಾರೆ ಬಂಧಿತರಾಗಿದ್ದಾರೆ. ಪಾತ್ರ ಮಾಡಲು ಅವರು ಆ ಸಮಯಕ್ಕೆ ಸರಿಯಾಗಿಯೇ ಬರುತ್ತಾರೆ. ಅವರೂ ಸಹ ತಮ್ಮ ಪಾತ್ರವನ್ನು ಮಾಡಲೇಬೇಕು, ಎಲ್ಲರನ್ನು ಸುಖಿಯನ್ನಾಗಿ ಮಾಡಬೇಕು. ಆತ್ಮ ಎಂದರೆ ಏನು ಎಂದು ವಿಚಾರ ಮಾಡಿ. ತಂದೆಯ ಆತ್ಮವು ಸಹ ಇಷ್ಟು ಸಣ್ಣ ಬಿಂದುವಿನ ಸಮಾನವಾಗಿದೆ. ಇಷ್ಟು ಸಣ್ಣ ವಸ್ತುವಿನ ಪೂಜೆಯನ್ನಂತೂ ಯಾರೂ ಮಾಡಲು ಸಾಧ್ಯವಿಲ್ಲ. ಭಕ್ತಿಯಲ್ಲಿ ಪೂಜೆ ಮಾಡಲು ಸಾಧ್ಯವಾಗುವಂತೆ ದೊಡ್ಡ ಆಕಾರದಲ್ಲಿ ಮಾಡುತ್ತಾರೆ. ಅವರನ್ನೇ ಶಿವ ಅಥವಾ ರುದ್ರ ಎಂದು ಹೇಳಲಾಗುತ್ತದೆ. ಅವರು ಬಿಂದುವಿನ ಸಮಾನ ಇದ್ದಾರೆ. ತಿಲಕವನ್ನು ಇಡುತ್ತಾರಲ್ಲವೇ. ಇದನ್ನು ಬಹಳ ಚೆನ್ನಾಗಿ ತಿಳಿದುಕೊಳ್ಳಬೇಕಾಗುತ್ತದೆ. ಬೇರೆಯವರಂತೂ ಯಾರೂ ಇದನ್ನು ತಿಳಿಸಲು ಸಾಧ್ಯವಿಲ್ಲ. ಇದು ಬಹಳ ಸೂಕ್ಷ್ಮ ವಿಚಾರವಾಗಿದೆ. ಇವುಗಳನ್ನು ತಂದೆಯೇ ತಿಳಿಸುತ್ತಾರೆ. ತಂದೆ ಹೇಳುತ್ತಾರೆ ನೋಡಿ ಆತ್ಮ ಎಷ್ಟು ಚಿಕ್ಕದಿದೆ. ಆದರೆ ಆತ್ಮದ ಇಂದ್ರಿಯಗಳು ನೋಡಿ ಎಷ್ಟು ದೊಡ್ಡದಿದೆ. ಈ ಸಮಯದಲ್ಲಿ ಆತ್ಮ ಮತ್ತು ಶರೀರ ಎರಡೂ ಪತಿತವಾಗಿದೆ. ಈಗ ಪುನಃ ಪಾವನ ಆಗಬೇಕು. ನೀವು ಅವ್ಯಭಿಚಾರಿಯಾಗಿ. ಒಬ್ಬರಿಂದಲೇ ಕೇಳಿ ಒಬ್ಬರನ್ನೇ ನೆನಪು ಮಾಡಿ. ಓಹೋ! ಬಾಬಾ ನೀವು ಬಹಳ ಚಮತ್ಕಾರ ಮಾಡುತ್ತೀರಿ. ಜ್ಞಾನವನ್ನು ಹೇಗೆ ತಿಳಿಸುತ್ತೀರಿ, ಈ ಜ್ಞಾನವನ್ನು ಕೊಡಲು ಬೇರೆಯಾರಿಗೂ ಶಕ್ತಿ ಇಲ್ಲ. ತಂದೆಯು ಬಂದಾಗ ಮಾತ್ರ ನಿಮ್ಮ ಏರುವ ಕಲೆ ಆಗುತ್ತದೆ. ಈ ಸಮಯ ಎಲ್ಲಾ ಮನುಷ್ಯರು ಪತಿತರಾಗಿದ್ದಾರೆ. ಆದ್ದರಿಂದ ತಂದೆಯು ಹೇಳುತ್ತಾರೆ ನಾನು ಎಲ್ಲರ ಉದ್ಧಾರ ಮಾಡಲು ಬರುತ್ತೇನೆ. ರಾತ್ರಿಯನ್ನು ಹಗಲನ್ನಾಗಿ ಮಾಡಲು ಮಾರ್ಗವನ್ನು ತೋರಿಸುತ್ತೇನೆ. ನಯನಹೀನರಿಗೆ ಮಾರ್ಗವನ್ನು ತೋರಿಸು . . . ಎಂದು ಹಾಡುತ್ತಾರೆ. ನಾವು ನಯನಹೀನರು ನಮಗೆ ಮಾರ್ಗ ತೋರಿಸು ಎಂದು ಎಲ್ಲರೂ ಹೇಳುತ್ತಾರೆ. ಎಲ್ಲಿಯ ಮಾರ್ಗ? ತಮ್ಮ ಮನೆಯ ಮಾರ್ಗ. ಇಲ್ಲಂತೂ ಬಹಳ ದುಃಖವಿದೆ. ನಾವು ಕುರುಡ ಮಕ್ಕಳಿಗೆ ತಂದೆಯೇ ಊರುಗೋಲು ಆಗಿದ್ದಾರೆ. ತಂದೆ ಎನ್ನುವ ಅಕ್ಷರದಿಂದ ಆಸ್ತಿಯ ನೆನಪು ಬರುತ್ತದೆ. ಪ್ರಭು ಅಥವಾ ಈಶ್ವರ ಎಂದು ಹೇಳುವುದರಿಂದ ಆಸ್ತಿಯ ನಶೆಯು ಇರುವುದಿಲ್ಲ. ಏಕೆಂದರೆ ಭಗವಂತ ಎಂದು ಯಾರಿಗೆ ಹೇಳಲಾಗುತ್ತದೆ? ತ್ವಮೇವ ಮಾತಶ್ಚ ಪಿತ . . . ಇದು ಅವರ ಮಹಿಮೆಯಾಗಿದೆ. ಈ ವೇದಗಳೆಲ್ಲ ಅನಾದಿ ಎಂದು ಮನುಷ್ಯರು ಹೇಳುತ್ತಾರೆ. ಯಾವಾಗಿನಿಂದ ಓದುತ್ತಾ ಬಂದಿರಿ? ಎಂದು ಕೇಳಿ. ಸತ್ಯಯುಗದಿಂದಲೇ? ಅಲ್ಲಿ ಶಾಸ್ತ್ರಗಳಂತೂ ಇರುವುದಿಲ್ಲ. ಇದೆಲ್ಲಾ ಭಕ್ತಿ ಮಾರ್ಗದ್ದಾಗಿದೆ. ಅವರು ಇದೇನನ್ನೂ ತಿಳಿದಿಲ್ಲ. ತಂದೆ ಹೇಳುತ್ತಾರೆ ನಾನು ಬಂದು ನಿಮಗೆ ಬ್ರಹ್ಮನ ಮೂಲಕ ಎಲ್ಲದರ ಸಾರವನ್ನು ತಿಳಿಸುತ್ತೇನೆ. ಬ್ರಹ್ಮಾ ನನ್ನ ಮಗು ಅಥವಾ ವಿಷ್ಣುವಿನ ನಾಭಿಯಿಂದ ಬಂದಿದ್ದಾರೆಯೇ? ಬ್ರಹ್ಮಾರವರಂತೂ ಶಿವನ ಮಗು ಆಗಿದ್ದಾರೆ. ವಿಷ್ಣುವಿನ ಮಗುವಂತೂ ಅಲ್ಲ. ಬ್ರಹ್ಮಾರವರೇ ವಿಷ್ಣು ಆಗುತ್ತಾರೆ. ಮತ್ತೆ ವಿಷ್ಣು 84 ಜನ್ಮಗಳ ನಂತರ ಬ್ರಹ್ಮಾ ಆಗುತ್ತಾರೆ. ಇದು ಬಹಳ ಗುಹ್ಯ ರಹಸ್ಯವಾಗಿದೆ. ಇದನ್ನು ಮಕ್ಕಳೇ ತಿಳಿದಿದ್ದೀರಿ. ಈಗ ಬ್ರಹ್ಮಾ ಮುಖದಿಂದ ನೀವು ಬ್ರಾಹ್ಮಣ ಮಕ್ಕಳ ಜನ್ಮವಾಗಿದೆ. ಅಂದಮೇಲೆ ನೀವು ಮಕ್ಕಳಿಗೆ ಎಷ್ಟು ಖುಷಿ ಮತ್ತು ನಶೆ ಇರಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸಂಪೂರ್ಣ ಪಾವನರಾಗಲು ಅವ್ಯಭಿಚಾರಿ ಆಗಬೇಕು. ಒಬ್ಬ ತಂದೆಯಿಂದಲೇ ಕೇಳಬೇಕು. ಒಬ್ಬನನ್ನೇ ನೆನಪು ಮಾಡಬೇಕಾಗಿದೆ.

2. ಈಶ್ವರೀಯ ಸೇವಾಧಾರಿಗಳಾಗಿ ಭಾರತವನ್ನು ಪಾವನ ಮಾಡುವ ಸೇವೆ ಮಾಡಬೇಕು. ಒಬ್ಬ ತಂದೆಯ ಜೊತೆಗೆ ಪ್ರೀತಿಯ ಬುದ್ಧಿಯನ್ನು ಇಡಬೇಕಾಗಿದೆ.

ವರದಾನ: ಸ್ವ-ಸ್ಥಿತಿಯ ಮೂಲಕ ಪ್ರತಿಯೊಂದು ಪರಿಸ್ಥಿತಿಯನ್ನು ಪಾರು ಮಾಡುವಂತಹ ಮಾಸ್ಟರ್ ತ್ರಿಕಾಲದರ್ಶಿ ಭವ.

ಯಾವ ಮಕ್ಕಳು ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾರೆಯೋ ಅವರು ತನ್ನ ಸ್ವ-ಸ್ಥಿತಿಯ ಮೂಲಕ ಪ್ರತಿಯೊಂದು ಪರಿಸ್ಥಿತಿಯನ್ನು ಹೇಗೆ ಪಾರು ಮಾಡುತ್ತಾರೆಂದರೆ, ಆ ಪರಿಸ್ಥಿತಿಯೇ ಇಲ್ಲವೆಂಬಂತೆ. ಜ್ಞಾನಪೂರ್ಣ, ತ್ರಿಕಾಲದರ್ಶಿ ಆತ್ಮರು ಪ್ರತಿಯೊಂದು ಶಕ್ತಿ, ಜ್ಞಾನ ಬಿಂದು, ಪ್ರತಿಯೊಂದು ಗುಣವನ್ನು ಸಮಯದನುಸಾರ ಆದೇಶದಂತೆ ನಡೆಸುತ್ತಾರೆ. ಸಮಯದಲ್ಲಿ ಸಹನಾಶಕ್ತಿಗೆ ಆದೇಶ ಕೊಟ್ಟರೆ, ಸಮಯದ ನಂತರ ಬಂದಿತು, ಈ ರೀತಿ ಆಗಬಾರದು. ಯಾವ ಸಮಯದಲ್ಲಿ ಯಾವ ಶಕ್ತಿ, ಯಾವ ವಿಧಿಯಿಂದ ಬೇಕಾಗಿದೆಯೋ ಆ ಸಮಯದಲ್ಲಿ

ತನ್ನ ಕಾರ್ಯ ಮಾಡಲಿ, ಆಗ ಖಜಾನೆಗಳ ಮಾಲೀಕ, ಮಾಸ್ಟರ್ ತ್ರಿಕಾಲದರ್ಶಿ ಎಂದು ಹೇಳಲಾಗುತ್ತದೆ.

ಸ್ಲೋಗನ್: ಯಾರು ಸದಾ ಖುಷಿಯಾಗಿರುತ್ತಾರೆ ಹಾಗೂ ಎಲ್ಲರಿಗೂ ಖುಷಿಯನ್ನು ಹಂಚುತ್ತಾರೆಯೋ ಅವರೇ ಸತ್ಯ ಸೇವಾಧಾರಿ ಆಗಿದ್ದಾರೆ.